## ಏನಿದು ಎಂಡಿಎಂಎ?

ಎಂಡಿಎಂಎ ಒಂದು ಬಗೆಯ ಮಾತ್ರೆ. 1912ರಲ್ಲಿ ಮೊದಲ ಬಾರಿಗೆ ಎಂಡಿಎಂಎ ಮಾತ್ರೆಗಳನ್ನು ತಯಾರಿಸಲಾಯ್ತು. 70ರ ದಶಕದಲ್ಲಿ ಈ ಮಾತ್ರೆಗಳನ್ನು ಮಾನಸಿಕರೋಗಿಗಳ ಚಿಕಿತ್ಸೆಯಲ್ಲಿ ಬಳಸಿಕೊಳ್ಳಲಾಗುತ್ತಿತ್ತು. ಅದರ ಅಮಲಿನ ಗುಣ ಜಾಹೀರಾಗಿ 80ರ ದಶಕದ ಹೊತ್ತಿಗೆ ಬೀದಿ ಬೀದಿಗಳಲ್ಲಿ ಇಟ್ಟು ಇದನ್ನು ಮಾರುವಷ್ಟು ಜನಪ್ರಿಯವಾಯ್ತು. ಇಂದಿಗೂ ಹಲವು ಪಬ್‌ಗಳಲ್ಲಿ, ರೇವ್ ಪಾರ್ಟಿಗಳಲ್ಲಿ ಬಳಸಲಾಗುತ್ತದೆ. ವಿವಿಧ ಬಗೆಯ ಆಲ್ಕೊಹಾಲ್ ಪಾನೀಯಗಳಲ್ಲಿ ಇದನ್ನು ಸೇರಿಸಿ ಸೇವಿಸಲಾಗುತ್ತದೆ.

ಸೇವಿಸಿದ ಮುಕ್ಕಾಲು ಗಂಟೆಯಲ್ಲಿ ಅದು ಪರಿಣಾಮ ಬೀರಲಾರಂಭಿಸುತ್ತದೆ. ಆರರಿಂದ ಎಂಟು ಗಂಟೆಗಳವರೆಗೆ ಅದರ ಪರಿಣಾಮ ಇರುತ್ತದೆ. ಮೆದುಳಿನ ಮೇಲೆ ಪ್ರಭಾವ ಬೀರಿ ಒಂದು ರೀತಿಯ ಭ್ರಮಾಲೋಕವನ್ನು ಸೃಷ್ಟಿಸುತ್ತದೆ. ಮನಸ್ಸಿನ ಭಾವಗಳನ್ನು ಬದಲಿಸಿ ಖುಷಿಯ ಅನುಭವವಾಗುವಂತೆ ಮಾಡುತ್ತದೆ.

ಇದರಲ್ಲಿ ಮೂರು ಪ್ರಕಾರಗಳಿವೆ. 1. ಡಿಪ್ರೆಸೆಂಟ್ಸ್ ಎಂಡಿಎಂಎ – ಇದು ಮನಸ್ಸಿನ ಒತ್ತಡವನ್ನು ನಿವಾರಣೆ ಮಾಡಿ ರಿಲ್ಯಾಕ್ಸ್ ಭಾವವನ್ನು ಹುಟ್ಟಿಸುತ್ತದೆ. 2. ಸ್ಟಿಮ್ಯೂಲೆಂಟ್ಸ್ ಎಂಡಿಎಂಎ – ಇದು ಮನಸ್ಸು, ದೇಹದಲ್ಲಿ ಚೈತನ್ಯ ಹೆಚ್ಚಿದ ಭಾವವನ್ನು ಹುಟ್ಟಿಸುತ್ತದೆ. ದಣಿವು ಅರಿವಿಗೆ ಬರದ ಹಾಗೆ ನೋಡಿಕೊಳ್ಳುತ್ತದೆ. 3. ಹ್ಯಾಲೋಸಿನೇಷನ್ ಎಂಡಿಎಂಎ – ಇದರ ಪರಿಣಾಮ ಉಳಿದವೆರಡಕ್ಕಿಂತ ತೀವ್ರ. ಸೇವಿಸಿದವರ ದೃಷ್ಟಿಶಕ್ತಿಯನ್ನು ಕುಂಠಿತಗೊಳಿಸಿ ಅವರ ಎದುರಿಗೆ



ಒಂದು ಭ್ರಮಾಲೋಕವನ್ನು ಸೃಷ್ಟಿಸುತ್ತದೆ.

ವಿಶೇಷ ಪ್ರಕರಣಗಳನ್ನು ಹೊರತುಪಡಿಸಿ ಸಾಮಾನ್ಯ ಸಂದರ್ಭಗಳಲ್ಲಿ ಈ ಮಾತ್ರೆಗಳ ಬಳಕೆಯನ್ನು ಬಹುತೇಕ ರಾಷ್ಟ್ರಗಳಲ್ಲಿ ನಿಷೇಧಿಸಲಾಗಿದೆ. ಆದರೆ ಕಾನೂನಿನ ಕಣ್ತಪ್ಪಿಸಿ ಜಗತ್ತಿನಾದ್ಯಂತ ಇದು ಹರಿದಾಡುತ್ತಲೇ ಇದೆ.

2016ರಲ್ಲಿ15ರಿಂದ 64 ವರ್ಷ ವಯಸ್ಸಿನ 20 ಕೋಟಿಗೂ ಅಧಿಕ ಜನರು ಈ ಮಾದಕ ಮಾತ್ರೆಯ ದಾಸರಾಗಿದ್ದಾರೆ ಎಂದು ಒಂದು ವರದಿ ಹೇಳುತ್ತದೆ. ಅಮೆರಿಕದಲ್ಲಿ ಒಟ್ಟೂ ಜನಸಂಖ್ಯೆಯ ಶೇ 7ರಷ್ಟು ಜನರು ತಮ್ಮ ಜೀವನದಲ್ಲಿ ಒಮ್ಮೆಯಾದರೂ ಎಂಡಿಎಂಎ ಸೇವಿಸುತ್ತಾರೆ ಎಂದು ಇನ್ನೊಂದು ವರದಿ ಹೇಳಿದೆ.

ನಾಯಕನಟನೊಬ್ಬ ನಟಿಗೆ ನೀಡುವ ಭರ್ಜರಿ ಆಫರ್!

***

ಈಗ ಮತ್ತೆ ಜಗ್ಗೇಶ್ ಅವರ ಟ್ವೀಟ್‌ಗೆ ಮರಳೋಣ. 'ಎರಡು ಸಿನಿಮಾಗೆ ಕುಬೇರನ ಮಕ್ಕಳು!', '2015ರಿಂದ ಮೋಜು ಮಸ್ತಿ ಕುಸ್ತಿ ಸಿನಿಮಾ ಜೀವನ!' – ಈ ಎರಡು ಸಾಲುಗಳು ಬೇರೆಯೇ ಏನನ್ನೋ ಹೇಳುತ್ತಿರುವಂತಿದೆ. ಅದರಲ್ಲಿಯೂ ಈ ಸಂದರ್ಭಕ್ಕಂತೂ ಹಲವು ಅರ್ಥಗಳನ್ನು ಹೊರಡಿಸುತ್ತಿರುವಂತಿದೆ.

ಗಂಡಸು ವಿಕೃತಿಗಿಳಿಯುವ ಮೂರು ಕಾರಣಗಳೆಂದು ಹೆಣ್ಣು, ಹೊನ್ನು, ಮಣ್ಣನ್ನು ಗುರ್ತಿಸಲಾಗುತ್ತದೆ. ಕನ್ನಡ ಚಿತ್ರರಂಗ ಮಣ್ಣಿನಿಂದ ದೂರವಾಗಿ ತುಂಬ ಕಾಲವಾಯ್ತು. ಆದರೆ ಇನ್ನೊಂದು ವಸ್ತುವನ್ನು ಆ ಜಾಗದಲ್ಲಿ ಕೂಡಿಸಬಹುದು. ಅದು ಮದ್ಯ!

ಸಿನಿಮಾ ಎಂಬುದು ಒಂದು ಅಮಲು ಎನ್ನುವ ಮಾತಿದೆ. ಬಹಳಷ್ಟು ಸೃಜನಶೀಲ ವ್ಯಕ್ತಿಗಳು ಈ ಅಮಲು ಹತ್ತಿಸಿಕೊಂಡು ಶ್ರೇಷ್ಠ ಸಿನಿಮಾಗಳನ್ನು ಕೊಟ್ಟಿರುವ ಉದಾಹರಣೆಗಳೂ ಇವೆ. ಆದರೆ ಬಹಳಷ್ಟು ಸಿನಿಮಾ ಮಂದಿಗೆ ಸಿನಿಮಾ ಅಮಲಷ್ಟೇ ಸಾಲುವುದಿಲ್ಲ. ಅವರು ಉಳಿದ ಕಡೆಯಲ್ಲಿಯೂ ಅಮಲು ಹುಡುಕುವವರು. ಆ ಅಮಲು ಎಂಥದ್ದು? ಅದರ ಒಂದು ಮೂಲ ಹೆಣ್ಣು. ಅದರ ಪರಿಣಾಮಗಳನ್ನು ಮೇಲಿನ ಉದಾಹರಣೆಗಳಲ್ಲಿ ನೋಡಿದ್ದೇವೆ. ಅದರ ಜೊತೆಜೊತೆಗೇ ಇದ್ದ ಇನ್ನೊಂದು ಅಮಲು, ಮದ್ಯ. ಈ ಎರಡರ ಜೊತೆಗೆ ಈಗ ಇನ್ನೊಂದಿದೆ. ಅದು ಡ್ರಗ್ಸ್!

ಇತ್ತೀಚೆಗೆ ಪೊಲೀಸರು ಬಂಧಿಸಿದ ಡ್ರಗ್ ಪೆಡ್ಲರ್ ಅನಿಕಾ ಮತ್ತು ಜೊತೆಗಾರರು, ಈ ವ್ಯವಹಾರಕ್ಕೂ ಬಣ್ಣದ ಲೋಕಕ್ಕೂ ಇರುವ ಸಂಬಂಧದ ಕುರಿತು ಬಾಯಿಬಿಟ್ಟಾಗಿನಿಂದ ದಿನಕ್ಕೊಂದು ಹೊಸ ತಿರುವು, 'ಬ್ರೇಕಿಂಗ್ ನ್ಯೂಸ್'ಗಳು ಹೊರಬೀಳುತ್ತಲೇ ಇವೆ. ಆದರೆ ಇದನ್ನು ಬರೀ ಒಂದು ಘಟನೆಯಾಗಿ ನೋಡಿದರೆ ಅರ್ಧಸತ್ಯವಷ್ಟೇ ಕಣ್ಣಿಗೆ ಕಾಣಿಸುತ್ತದೆ. ತೆರೆಯ ಮೇಲೆ ಆದರ್ಶದ ಹೊಳೆಯನ್ನು ಹರಿಸುವ, ಅಪಾರ ಅಭಿಮಾನಿಗಳ ಪಾಲಿನ ದೇವರುಗಳು ಇರುವ ಚಿತ್ರಜಗತ್ತಿಗೂ ಅಪರಾಧ ಜಗತ್ತಿಗೂ ಇರುವ ಸಂಬಂಧದ ಭಾಗವಾಗಿಯೇ ಈ ಘಟನೆಯನ್ನು ಗ್ರಹಿಸಬೇಕಾಗಿದೆ.

ಬಣ್ಣದ ಲೋಕದೊಳಗೆ ಮಾದಕ ಪದಾರ್ಥಗಳು ಹರಿದಾಡುವ ವಿಷಯ ಹೊರಬಿದ್ದಿದ್ದು ಇದೇ ಮೊದಲ ಸಲವೇನಲ್ಲ. ಇದೊಂದು ರೀತಿ ಸಮುದ್ರದೊಳಗಿನ ಬೃಹದಾಕಾರದ ತಿಮಿಂಗಲದ ಹಾಗೆ. ಆಗಾಗ ನೀರಿನ ಮೇಲ್ಮೈಗೆ ಬಂದು ತನ್ನ ಮೂತಿಯ ತುದಿಯನ್ನು ತುಸುವೇ ನೀರಿನಿಂದ ಮೇಲೆತ್ತಿ ತೋರಿ ಮತ್ತೆ ಮುಳುಗುತ್ತಿರುತ್ತದೆ. ಅದನ್ನು ನೋಡಿದವರು, ಆನೆಯನ್ನು ಮುಟ್ಟಿ ವರ್ಣಿಸುವ ಕುರುಡರ ಹಾಗೆ ತಿಮಿಂಗಲದ ಇಡೀ ದೇಹ ಹೇಗಿರಬಹುದು ಎಂದು ಚರ್ಚಿಸುತ್ತಲೇ ಇರುತ್ತಾರೆ. ಆ ತಿಮಿಂಗಲವನ್ನು ಇಡಿಯಾಗಿ ಕಂಡವರು ಕಮ್ಮಿ. ಕಂಡವರು ಅದರ ಕುರಿತು ಮಾತಾಡುವುದಿಲ್ಲ. ಯಾಕೆಂದರೆ ಮೇಲಿನಿಂದ ಮೂತಿ ಕಾಣಿಸಿದ ಅದು ಮುಳುಗಿಬಿಟ್ಟರೆ 'ಅದು ಇತ್ತು' ಎಂಬುದರ ಸುಳಿವೂ ಸಿಕ್ಕದಂತೆ ಕಾಣೆಯಾಗುತ್ತದೆ. ಹಾಗಾಗಿ ಚಂದನವನದ ಉದ್ದಗಲಕ್ಕೂ ವ್ಯಾಪಿಸಿಕೊಂಡಿದ್ದರೂ ಡ್ರಗ್ಸ್ ಜಾಲವೆಂಬ ತಿಮಿಂಗಲವನ್ನು ಬೊಟ್ಟು ಮಾಡಿ ತೋರಿಸುವ ಹಾಗಿಲ್ಲ. ಅದರ ಮಾಯೆಯೇ ಅಂಥದ್ದು. ಈ ವಿಷಯದ ಕುರಿತು ಮಾತನಾಡುವವರು ಸಾಕಷ್ಟು ಜನ ಸಿಗುತ್ತಾರೆ. ಆದರೆ ಸಾಕ್ಷ್ಯಗಳಿಗೆ ನಿಲುಕದ ತಮ್ಮ ಮಾತುಗಳ ಜೊತೆಗೆ ತಮ್ಮ ಗುರುತು ಬಹಿರಂಗಪಡಿಸಲು ಮಾತ್ರ ಯಾರೂ ಮುಂದೆ ಬರುವುದಿಲ್ಲ. ಹಾಗಾಗಿ

